ರಾಮ್ ರಹೀಮ್ ಸಿಂಗ್‌ನ ವಿರುದ್ಧ ಆರೋಪಗಳ ತನಿಖೆ ನಡೆಸಿದ ಹೈಕೋರ್ಟ್ ಆತನ ಬಂಧನಕ್ಕೆ ಆದೇಶ ನೀಡಿತು. ಆದರೆ ಆತನ ಬಂಧನವನ್ನು ತಡೆಯಲೆತ್ನಿಸಿದ ಸಾವಿರಾರು ಬೆಂಬಲಿಗರ ರಸ್ತೆಗಳಿದು ಹಿಂಸಾಕೃತ್ಯಗಳನ್ನು ನಡೆಸಿದರು. ಪೊಲೀಸರ ಜತೆಗೆ ನಡೆದ ಬೀದಿಕಾಳಗದಲ್ಲಿ ಒಟ್ಟು 32 ಜನರು ಸತ್ತು, 200ಕ್ಕೂ ಹೆಚ್ಚು ಜನರು ಗಾಯಗೊಂಡದ್ದು ಹೊಸ ಇತಿಹಾಸ ನಿರ್ಮಿಸಿತು. ಆತನ ಬಂಧನದ ಬಳಿಕ ಆ ಆಶ್ರಮದಲ್ಲಿ ನಡೆಯುತ್ತಿದ್ದ ಲೈಂಗಿಕ ಹಗರಣಗಳು, ಮಹಿಳೆಯರ ಶೋಷಣೆಯ ಕರಾಳ ಮುಖಗಳು ಹೊರಜಗತ್ತಿಗೆ ಅನಾವರಣಗೊಂಡವು. ಭಾರತದಲ್ಲಿ ಸೆಕ್ಸ್ ಎನ್ನುವುದು ಕಪಟ ಬಾಬಾಗಳ ಕೃಪಾಶ್ರಯದಲ್ಲಿ ಎಂತಹ ಕರಾಳ ದಂಧೆಯಾಗಿದೆ ಎನ್ನುವುದೂ ಗೊತ್ತಾಯಿತು. ರಾಮ್ ರಹೀಮ್‌ನ ಸೋದರಿ ಎಂದುಕೊಂಡು ಸಂಗಾತಿಯಾಗಿದ್ದ ಹನಿಪ್ರೀತ್ ಇನ್ಸಾನ್ ಎನ್ನುವ ಮಹಿಳೆಯ ಬಂಧನಕ್ಕೂ ಪೊಲೀಸರು ಕೆಲವು ವಾರಗಳ ಕಾಲ ಪರದಾಡಿ ಕೊ ನೆಗೂ ಆಕೆಯನ್ನು ಬಂಧಿಸಿದ್ದು ವರ್ಷದ ದೊಡ್ಡ ಸುದ್ದಿಯಾಯಿತು.

## 4 ಅಭಿವ್ಯಕ್ತಿಯ ಆಕ್ರೋಶ

ಸಂದುಹೋದ ವರ್ಷದಲ್ಲಿ ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ಅಡ್ಡಿಗಳ ಬಗ್ಗೆ ಪದೇ ಪದೇ ಚರ್ಚೆ, ವಾಗ್ವಾದಗಳು ನಡೆದವು. ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ಅಪರಿಚಿತ ದುಷ್ಕರ್ಮಿಗಳು ಗುಂಡಿಟ್ಟು ಕೊಂದ ಘಟನೆಗೆ ದೇಶದ ಹಲವೆಡೆ ವ್ಯಾಪಕ ಪ್ರತಿಭಟನೆಗಳು ನಡೆದವು. ಕರ್ನಾಟಕದಲ್ಲಂತೂ ಎಡ–ಬಲ ಬಣಗಳ ನಡುವಣ ನಿರಂತರ ವಾಗ್ವಾದ ಮತ್ತು ಕೆಸರೆರಚಾಟಕ್ಕೆ ಈ ಘಟನೆ ಸಾಕ್ಷಿಯಾಯಿತು. ಈ ಹಿಂದೆ ನಡೆದ ವಿಚಾರವಾದಿ ಎಂ.ಎಂ.ಕಲ್ಬುರ್ಗಿ ಅವರ ಹತ್ಯೆ, ಮಹಾರಾಷ್ಟ್ರದ ದಾಬೋಲ್ಕರ್ ಮತ್ತು ಪನ್ಸಾರೆ ಅವರ ಹತ್ಯೆಯೂ ಹೀಗೆಯೇ ನಿಗೂಢವಾಗಿ ಉಳಿದಿದ್ದು, ವಿಚಾರವಾದಿಗಳು ಮತ್ತು ಪ್ರಗತಿಪರರು ಈ ಹತ್ಯೆಗಳಿಗೆ ಸಂಬಂಧಿಸಿ ಬಹುದೊಡ್ಡ ಪ್ರತಿಭಟನೆಗಳನ್ನು ದಾಖಲಿಸಿದ್ದಾರೆ. ವರ್ಷ ಮುಗಿದರೂ ಈ ವಿಚಾರವಾದಿಗಳ ಹತ್ಯೆಕೋರರನ್ನು ಬಂಧಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಪ್ರಗತಿಪರರ ಪ್ರತಿಭಟನೆ ಮುಂದಿನ ವರ್ಷಕ್ಕೂ ಮುಂದುವರಿಯುವುದು ಖಚಿತ.


'ಪದ್ಮಾವತಿ'ಗೆ ಬೆದರಿಕೆ

ಬಾಲಿವುಡ್‌ನ ಪ್ರತಿಭಾವಂತ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಪದ್ಮಾವತಿ' ಸಿನಿಮಾ ಕಥೆಯ ಕಾರಣಕ್ಕಾಗಿಯೇ ಕೆಲವು ರಜಪೂತ ಸಂಘಟನೆಗಳಿಂದ ತೀವ್ರ ಪ್ರತಿಭಟನೆ ಎದುರಿಸಿ ಬಿಡುಗಡೆಯ ದಿನಾಂಕವನ್ನೇ 2018ರ ಜನವರಿಗೆ ಮುಂದೂಡಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಂದ ಇನ್ನೊಂದು ಅಡ್ಡಿ. ದೀಪಿಕಾ ಪಡುಕೋಣೆ ರಾಣಿ ಪದ್ಮಿನಿಯ ಪಾತ್ರ ವಹಿಸಿದ್ದು ದೈಹಿಕ ಹಲ್ಲೆಯ ಬೆದರಿಕೆಯನ್ನು ಎದುರಿಸಬೇಕಾಯಿತು. ದೊರೆ ಅಲ್ಲಾವುದ್ದೀನ್ ಖಿಲ್ಜಿ ಮತ್ತು ರಾಣಿ ಪದ್ಮಿನಿಯ ನಡುವಣ ಪ್ರೇಮಕಥೆ ಇರುವ ಹಿನ್ನೆಲೆಯಲ್ಲಿ ರಜಪೂತ ಗುಂಪುಗಳು ಈ ಚಿತ್ರವನ್ನು ಬಿಡುಗಡೆ ಮಾಡಲು ಬಿಡುವುದಿಲ್ಲ ಎಂದು ಬೆದರಿಕೆ ಒಡ್ಡಿವೆ. ಗುಜರಾತ್ ಮತ್ತು ಹಿಮಾಚಲ ಪ್ರದೇಶದ ಚುನಾವಣೆಗಳ ಹಿನ್ನೆಲೆಯಲ್ಲಿ ಈ ಬೆದರಿಕೆಗಳಿಗೆ ಹೊಸ ರಾಜಕೀಯ ಆಯಾಮಗಳು ದೊರೆತದ್ದು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿತು. ಸಿನಿಮಾವನ್ನು ಆಯ್ದ ಪತ್ರಕರ್ತರಿಗೆ ಸೆನ್ಸಾರ್ ಆಗುವುದಕ್ಕಿಂತ ಮುಂಚೆಯೇ ತೋರಿಸಿದ ಬನ್ಸಾಲಿ ಅವರ ಕ್ರಮಕ್ಕೆ ಸೆನ್ಸಾರ್ ಮಂಡಳಿ ತೀವ್ರ ಅತೃಪ್ತಿ ವ್ಯಕ್ತಪಡಿಸಿತು. ಬಿಡುಗಡೆ ಆಗುವುದಕ್ಕಿಂತ ಮುಂಚೆಯೇ ಈ ಚಿತ್ರಕ್ಕೆ ಭಾರೀ ಪ್ರಚಾರ ಸಿಕ್ಕಿದ್ದು, ಬಿಡುಗಡೆಯಾದ ಬಳಿಕ ಬಾಕ್ಸಾಫೀಸ್‌ನಲ್ಲಿ ಯಶಸ್ವಿಯಾಗುವ ಭರವಸೆ ಮೂಡಿಸಿದೆ. ಈಗ ಚುನಾವಣೆಗಳು ಮುಗಿದಿರುವುದರಿಂದ ಪ್ರತಿಭಟನೆಗೆ ರಾಜಕೀಯ ಆಯಾಮ ಇಲ್ಲವಾಗಲಿದ್ದು, ಬಹುತೇಕ ಜನವರಿಯಲ್ಲಿ ಚಿತ್ರ ತೆರೆ ಕಾಣಬಹುದು.

ತಮಿಳ್ನಾಡಿನಲ್ಲಿ ವಿಜಯ್ ಅಭಿನಯದ ಮರ್ಸೆಲ್ ಎನ್ನುವ ಚಿತ್ರ ಜಿಎಸ್‌ಟಿ ತೆರಿಗೆ ಪದ್ಧತಿಯ ವಿರುದ್ಧ ಆಕ್ರೋಶಪರ ಡೈಲಾಗ್‌ಗಳನ್ನು ಹೊಂದಿದ್ದು, ಆ ಚಿತ್ರದ ವಿರುದ್ಧವೂ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದರು. ಆದರೆ ಚಿತ್ರ ಬಿಡುಗಡೆಯಾಗಿ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿತು. ಈ ಪ್ರಕರಣದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ನಿರ್ಮಾಪಕ, ನಟ ವಿಶಾಲ್ ಧ್ವನಿ ಎತ್ತಿದ್ದು ಅದಕ್ಕೆ ಕಮಲಹಾಸನ್ ಮತ್ತು ರಜನಿಕಾಂತ್ ಬಹಿರಂಗ ಬೆಂಬಲ ವ್ಯಕ್ತಪಡಿಸಿದರು.

ಈ ಮಧ್ಯೆ ಬಹುಭಾಷಾ ನಟ ಪ್ರಕಾಶ್ ರೈ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ದೊಡ್ಡ ಧ್ವನಿಯಲ್ಲಿ ಮಾತನಾಡತೊಡಗಿ ಇಡೀ ದೇಶದ ಗಮನ ಸೆಳೆದರು. ನೇರವಾಗಿ ಪ್ರಧಾನಿ ನರೇಂದ್ರ ಮೋದಿಯವರಿಗೇ ಪ್ರಶ್ನೆಗಳನ್ನು ಕೇಳತೊಡಗಿದ್ದರಿಂದ ಪ್ರಕಾಶ್ ರೈ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರವೂ ನಡೆಯಿತು. ಪ್ರಕಾಶ್ ರೈ ಈ ವರ್ಷ ಅತ್ಯಧಿಕ ಸುದ್ದಿಯಲ್ಲಿರುವ ನಟ ಎನ್ನಿಸಿಕೊಂಡರು.

## 5 ಜಿಎಸ್‌ಟಿ ಗೊಂದಲ

ಜುಲೈ 1ರಂದು ಕೇಂದ್ರ ಸರ್ಕಾರ ಜಾರಿಗೊಳಿಸಿದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಾಯ್ದೆ ಸ್ವಾತಂತ್ರ್ಯೋತ್ತರ ಭಾರತದ 70 ವರ್ಷಗಳ ಇತಿಹಾಸದಲ್ಲೇ ಅತ್ಯಂತ ದೊಡ್ಡ ತೆರಿಗೆ ಸುಧಾರಣೆ ಎಂದು ಭಾವಿಸಲಾಗಿದೆ. 2.3 ಸಹಸ್ರಕೋಟಿ ಡಾಲರ್ ಮೌಲ್ಯದ ಭಾರತೀಯ ಆರ್ಥಿಕತೆಯ ಮೇಲೆ ಈ ಹೊಸ ತೆರಿಗೆ ಪದ್ಧತಿ ದೀರ್ಘಕಾಲೀನ ಪರಿಣಾಮ ಬೀರುವುದು ಖಚಿತವಾಗಿದೆ. ಕೇಂದ್ರ ಮತ್ತು ರಾಜ್ಯಗಳ ತೆರಿಗೆ ಆದಾಯ ಮೂಲಗಳನ್ನು ಇನ್ನಷ್ಟು ಬಲಪಡಿಸುವುದು ಮತ್ತು ತೆರಿಗೆ ಗೊಂದಲಗಳನ್ನು ಸುಧಾರಿಸುವುದು ಈ ಕ್ರಮದ ಮುಖ್ಯ ಉದ್ದೇಶ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.



### ಸನ್ನಿಯ ಜ್ವರ

ಈ ವರ್ಷ ಭಾರತದಲ್ಲಿ ಅತ್ಯಧಿಕ ಗೂಗಲ್ ಹುಡುಕಾಟಕ್ಕೆ ಈಡಾದ ಬೆಡಗಿ ಸನ್ನಿ ಲಿಯೊನ್. ನೀಲಿ ಚಿತ್ರಗಳ ನಾಯಕಿಯಾಗಿ ಜಾಗತಿಕ ಖ್ಯಾತಿ ಪಡೆದಿರುವ ಸನ್ನಿ ಲಿಯೊನ್, ಭಾರತದಲ್ಲಿ ಚಿತ್ರನಟಿಯಾಗಿ ಮನ್ನಣೆ ಪಡೆದಾಕೆ. ಈಕೆಯ ಕುರಿತು ತಿಳಿದುಕೊಳ್ಳುವ, ಈಕೆಯ ನಗ್ನಚಿತ್ರಗಳನ್ನು ತಡಕಾಡುವ ಭಾರತೀಯರ ಸಂಖ್ಯೆ ಈ ವರ್ಷ ಇನ್ನಷ್ಟು ಏರಿಕೆಯಾಗಿದೆ. ವರ್ಷದ 'ರತಿ ತಿಂಗಳೂ ಈಕೆಯ ಕುರಿತು ಒಂದಲ್ಲ ಒಂದು ರೋಚಕ ಸುದ್ದಿಗಳು ಪ್ರಕಟವಾಗಿವೆ. ವರ್ಷಾಂತ್ಯದಲ್ಲಿ ಹೊಸ ವರ್ಷದ ಸ್ವಾಗತ ಪಾರ್ಟಿಗೆ ಖಾಸಗಿ ಸಂಸ್ಥೆಯೊಂದು ಈಕೆಯ ನೃತ್ಯ ಆಯೋಜಿಸಿದ್ದಕ್ಕೆ ಬೆಂಗಳೂರಿನ ಪೊಲೀಸರು ಗರಂ ಆಗಿ, ಅನುಮತಿ ನಿರಾಕರಿಸಿದ್ದು ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಹೊಸ ಚರ್ಚೆಯನ್ನು ಹುಟ್ಟು ಹಾಕಿದೆ. ಸನ್ನಿ ಬಂದು ನೃತ್ಯ ಮಾಡಿದರೆ ಕಾನೂನು ಸುವ್ಯವಸ್ಥೆ ಕಾಪಾಡಲು ಆಗುವುದಿಲ್ಲ ಎಂದು ಪೊಲೀಸರು ನೀಡಿರುವ ಕಾರಣ, ರಾಜ್ಯ ಸರ್ಕಾರದ ಕುರಿತ ಲೇವಡಿಗೂ ಕಾರಣವಾಗಿದೆ.